ಅಧ್ಯಕ್ಷರು : ಮಾನ್ಯ ವಿಶ್ವೇಶ್ವರ ಹೆಗಡೆಯವರೆ, ಈಗ ಪ್ರಶ್ನೋತ್ತರವಾದ ಮೇಲೆ, ವಿಷಯವನ್ನು ಪ್ರಸ್ತಾಪ ಮಾಡಿ, ಆಗ ನಾನು ಅದನ್ನು ಕನ್ಸಿಡರ್ ಮಾಡುತ್ತೇನೆ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

3. ಪ್ರಶ್ನೋತ್ತರ

ಅ. ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ಮೂಲಕ ನೀಡಲಾದ ಉತ್ತರಗಳು:

ಅಖಿಲಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ (ಎಐಸಿಟಿಇ) ಯೋಜನೆಯನ್ನು ರಾಜ್ಯ ಪಾಲಿಟೆಕ್ನಿಕ್‌ಗಳಿಗೆ ಅಳವಡಿಸುವುದು

16 (272) : ಶ್ರೀ ಆಂಜನೇಯ ಹೆಚ್. (ಭರಮಸಾಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ (ಎಐಸಿಟಿಇ) ಯೋಜನೆಯನ್ನು ರಾಜ್ಯ ಪಾಲಿಟೆಕ್ನಿಕ್‌ಗಳಿಗೆ ಅಳವಡಿಸಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಎಂದಿನಿಂದ ಅದನ್ನು ಜಾರಿಗೆ ತರಲಾಗಿದೆ;

ಆ) ಪಾಲಿಟೆಕ್ನಿಕ್‌ಗಳ ಉಪನ್ಯಾಸಕರ ಮತ್ತು ಪ್ರಾಂಶುಪಾಲರುಗಳ ಹುದ್ದೆಗಳನ್ನು ತುಂಬಲು ಎಐಸಿಟಿಇ ನಿಯಮಗಳ ಪ್ರಕಾರ ವಿದ್ಯಾ ಅರ್ಹತೆಯನ್ನು ನಿಗದಿಗೊಳಿಸಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲಾಗಿದೆಯೇ; ತಂದಿದ್ದಲ್ಲಿ ಪ್ರತಿ ಒದಗಿಸುವುದು;

ಇ) ಎಐಸಿಟಿಇ ನಿಯಮವನ್ನು ಬದಿಗೊತ್ತಿ ಈ ಕೆಳಕಂಡ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರ ಹುದ್ದೆಗಳನ್ನು ತುಂಬುವಲ್ಲಿ ಕೇವಲ ಡಿಪ್ಲೊಮೊ ವಿದ್ಯಾರ್ಹತೆ ಹೊಂದಿರುವವರನ್ನು ಮಾತ್ರ ನೇಮಿಸಿರುವುದು ನಿಜವೇ; 1. ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು. 2. ಸಿ.ಪಿ.ಸಿ. ಪಾಲಿಟೆಕ್ನಿಕ್, ಮೈಸೂರು. 3. ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ, 4. ಡಿ.ಎ.ಸಿ.ಜೆ. ಪಾಲಿಟೆಕ್ನಿಕ್, ಚಿಕ್ಕಮಗಳೂರು 5. ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ. 6. ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು. 7. ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು 8. ಸರ್ಕಾರಿ ಜವಳಿ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು.

ಈ) ಹಾಗಿದ್ದಲ್ಲಿ, ಹತ್ತಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ ಬಿ.ಇ. ಪದವೀಧರರನ್ನು ವಜಾ ಮಾಡಿ ಡಿಪ್ಲೊಮೋಧಾರರನ್ನು ಮಾತ್ರ ನೇಮಕ ಮಾಡಿರುವುದಕ್ಕೆ ಕಾರಣಗಳೇನು;

ಉ) ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರದಿದ್ದಲ್ಲಿ, ಅದಕ್ಕೆ ಕಾರಣಗಳೇನು: ಈ ತಾರತಮ್ಯವನ್ನು ಸರಿಪಡಿಸಲಾಗುವುದೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):

ಅ) ಹೌದು. ದಿನಾಂಕ: 1-4-93 ರಿಂದ ಜಾರಿಗೆ ತರಲಾಗಿದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸರ್ಕಾರಿ ಪಾಲಿಟೆಕ್ನಿಕ್‌ಗಳ ಉಪನ್ಯಾಸಕರ ಸಂಯುಕ್ತ ಜೇಷ್ಠತಾ ಪಟ್ಟಿಯಲ್ಲಿನ ಜೇಷ್ಠತೆಯನ್ವಯ ಆಯಾ ಪಾಲಿಟೆಕ್ನಿಕ್‌ಗಳಲ್ಲಿನ ಅತ್ಯಂತ ಹಿರಿಯ ಉಪನ್ಯಾಸಕರನ್ನು ಪ್ರಾಂಶುಪಾಲರ ಪ್ರಭಾರದಲ್ಲಿಡಲಾಗಿದೆ. ಇದು ಕೇವಲ ತಾತ್ಕಾಲಿಕ ವ್ಯವಸ್ಥೆಯಾಗಿದೆ.

ಈ) ಪ್ರಶ್ನೆ (ಇ)ಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪ್ರಶ್ನೆ (ಆ)ಗೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಯಾವುದೇ ರೀತಿಯ ಲಿಖಿತ ರೂಪದಲ್ಲಿ ಉತ್ತರ ಬಂದಿಲ್ಲ. ದಯಮಾಡಿ ಸರ್ಕಾರ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು : ತಮಗೆ ಉತ್ತರವನ್ನು ಕಳುಹಿಸಿದ್ದಾರೆ ನೋಡಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನನ್ನದೊಂದು ವಿನಂತಿ, ಈಗ ನಿಮ್ಮ ಆಫೀಸ್‌ನವರಿಗೆ ಏನು ತೊಂದರೆಯಾಗಿದೆಯೋ ಗೊತ್ತಿಲ್ಲ, ಹಿಂದೆ ಉತ್ತರದ ಪ್ರತಿಗಳನ್ನು ಟೇಬಲ್ ಮೇಲೆ ಇಡುತ್ತಿದ್ದರು, ಈಗ ಅದನ್ನು ಬಂದ್ ಮಾಡಿದ್ದಾರೆ, ನಾವು ಅಲ್ಲಿ ಇಟ್ಟಿದ್ದೇವೆಂದು ಹೇಳುತ್ತಾರೆ, ಅಲ್ಲೂ ಇಟ್ಟಿರುವುದಿಲ್ಲ. ಇಲ್ಲಿ ನಮ್ಮ ಮಾಜಿ ಅಧ್ಯಕ್ಷರು ಇದ್ದಾರೆ, ಇವರು ಯಾವ ಉದ್ದೇಶಕ್ಕೆ ಇಡುವುದನ್ನು ಬಿಟ್ಟರು, ಈ ವಿಚಾರ ನಮಗೆ ಅರ್ಥವಾಗುತ್ತಿಲ್ಲ. ಹಿಂದೆ ನಾವು ಹೇಳಿದ್ದೆವು, ಆಗ ಟೇಬಲ್ ಮೇಲೆ ಉತ್ತರಗಳನ್ನು ಇಡುತ್ತಿದ್ದರು, ಈಗ ಬಿಟ್ಟಿದ್ದಾರೆ. ಈಗ ಟೇಬಲ್ ಮೇಲೆ ಇರುವಂಥಾದ್ದು ಎಲ್ಲರಿಗೂ ಆಗುವಷ್ಟು ಪ್ರತಿಗಳು ಇಲ್ಲ. ನಾವು ಏನು ಮಾಡುವುದು? ನಿಮ್ಮ ಆಫೀಸ್‌ನವರಿಗೆ ಏನು ತೊಂದರೆಯಾಗುತ್ತದೆಂಬುದನ್ನು ಹೇಳಿ. ನಿಮ್ಮ ಆಫೀಸ್‌ನವರು ಟೇಬಲ್ ಮೇಲೆ ಉತ್ತರದ ಪ್ರತಿಗಳನ್ನು ಇಡುವುದನ್ನು ಬಂದ್ ಮಾಡಿದರು, ಇದನ್ನು ನೀವೇ ಹೇಳಬೇಕು.

ಅಧ್ಯಕ್ಷರು : ಮಾನ್ಯ ಎಸ್.ಎಸ್. ಪಾಟೀಲ್‌ರವರೆ, ಸಾಮಾನ್ಯವಾಗಿ ಯಾವ ಸದಸ್ಯರು ಪ್ರಶ್ನೆಯನ್ನು ಹಾಕಿರುತ್ತಾರೆ. ಅವರಿಗೆ ಉತ್ತರದ ಪ್ರತಿಯನ್ನು ಒದಗಿಸುವಂತಹ ಸಂಪ್ರದಾಯವನ್ನು ಇಲ್ಲಿ ಬೆಳೆಸಿಕೊಂಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಇಲ್ಲಿ ಎಷ್ಟೊಂದು ಗಂಭೀರವಾದ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವನ್ನು ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರವಾದರೆ ಪರವಾಗಿಲ್ಲ, ಇದು ರಾಜ್ಯವ್ಯಾಪ್ತಿಯಾದ ವಿಚಾರವಾದುದರಿಂದ, ಅನೇಕ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಕೊಡಬೇಕೆಂದು ಇದ್ದಾರೆ. ಸರ್ಕಾರದಿಂದ ಏನಾದರೂ ಸಹಕಾರ ಬೇಕಾದರೆ ಕೊಡುತ್ತೇವೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಆ ಪ್ರಶ್ನೆಗಳಲ್ಲಿ ರಾಜ್ಯಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳು ಇವೆ. ರಾಜ್ಯಕ್ಕೆ ಸಂಬಂಧಪಟ್ಟ ಅನೇಕ ಉತ್ತರಗಳು ಇರುವುದರಿಂದ ಆ ಉತ್ತರಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿಕೊಟ್ಟರೆ ಅನುಕೂಲವಾಗುತ್ತದೆ.

ಮಾನ್ಯ ಸದಸ್ಯರು : ಪ್ರಶ್ನೆ ಕೇಳಿದವರಿಗೆ ಮಾತ್ರ ನಾವು ಉತ್ತರವನ್ನು ಕಳುಹಿಸಿಕೊಡುತ್ತೇವೆ ಎಂದು ಹೇಳಿದ್ದುದ್ದನ್ನು ನಾವು ಕೇಳಿದ್ದೇವೆ. ಆದರೆ ಉತ್ತರವನ್ನು ಎಲ್ಲಾ ಸದಸ್ಯರಿಗೆ ಕೊಡುವಂಥ ವ್ಯವಸ್ಥೆಯಾಗಬೇಕು.

ಅಧ್ಯಕ್ಷರು : ಸದಸ್ಯರು ಕೊಟ್ಟಿರುವ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ. ಈಗ ಮುಂದೆ ಹೋಗೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಬಹಳ ಜನ ಸದಸ್ಯರು ಹೊಸಬರಾಗಿರುವುದರಿಂದ, ಎಲ್ಲರಿಗೂ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕಳುಹಿಸಿದರೆ ಒಳ್ಳೆಯದು. ಎಲ್ಲರೂ ಉಪ ಪ್ರಶ್ನೆ ಕೇಳಬೇಕು ಎಂದೇನೂ ಇಲ್ಲ. ಪ್ರಶ್ನೆ ಹಾಕಿದವರೇ ಕೇಳಲಿ. ವಿಷಯ ಪ್ರಮುಖವಾಗಿದ್ದರೆ ಉಳಿದವರು ಕೇಳಲಿ, ಅಗತ್ಯವಿದ್ದರೆ ಹಾಗೂ ಇಡೀ ರಾಜ್ಯಕ್ಕೆ ಸಂಬಂಧಪಟ್ಟದ್ದಾದರೆ ಉಳಿದವರು ಕೇಳಲಿ. ನಮ್ಮ ಎಲ್ಲಾ ಸದಸ್ಯರ ಪರವಾಗಿ ತಮ್ಮಲ್ಲಿ ನನ್ನ ವಿನಂತಿ ಏನೆಂದರೆ, ಉತ್ತರ

ಎಲ್ಲಾ ಸದಸ್ಯರಿಗೆ ಸಿಕ್ಕಿದರೆ ಅವರು ಅದನ್ನು ಸ್ಟಡಿ ಮಾಡುತ್ತಾರೆ, ಬೇರೆ ಸಂದರ್ಭದಲ್ಲಿ ಅದನ್ನು ಉಪಯೋಗ ಮಾಡಿಕೊಳ್ಳುತ್ತಾರೆ, ಅದು ಅನುಕೂಲವಾಗುತ್ತದೆ. ಉತ್ತರಗಳನ್ನು ಎಲ್ಲರಿಗೂ ಕಳುಹಿಸುವ ಪದ್ಧತಿ ಮೊದಲು ಇತ್ತು, ದಯಮಾಡಿ ಮತ್ತೆ ಅದನ್ನು ಜಾರಿಗೆ ಕೊಡುವಂಥ ಪ್ರಯತ್ನ ಮಾಡಬೇಕು.

ಅಧ್ಯಕ್ಷರು : ತಾವು ಏನು ಸಲಹೆ ಕೊಟ್ಟಿದ್ದೀರಿ, ಅದರ ಬಗ್ಗೆ ನಾನು ಶೀಘ್ರವಾಗಿ ನಿರ್ಧಾರ ತೆಗೆದುಕೊಳ್ಳುತ್ತೇನೆ. ಮಾನ್ಯ ಆಂಜನೇಯ ಅವರೇ, ಈಗ ನೀವು ಉಪ ಪ್ರಶ್ನೆಯನ್ನು ಕೇಳಿ.

ಮಾನ್ಯ ಸದಸ್ಯರು : ಪ್ರಶ್ನೆ ಕೇಳಿದವರಿಗೆ ಮಾತ್ರ ಉತ್ತರವನ್ನು ಕಳುಹಿಸಲಾಗುವುದು ಎಂದು ಹೇಳಿದ್ದಾರೆ. ದಯವಿಟ್ಟು ಎಲ್ಲಾ ಸದಸ್ಯರಿಗೆ ಉತ್ತರಗಳನ್ನು ಕಳುಹಿಸಬೇಕು ಎನ್ನುವುದು ನಮ್ಮ ಕೋರಿಕೆ. ಇದನ್ನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸುತ್ತಿದ್ದೇನೆ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ. ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಪ್ರಿನ್ಸಿಪಾಲರನ್ನು ನೇಮಕ ಮಾಡತಕ್ಕಂಥ ಪ್ರಕ್ರಿಯೆಯಲ್ಲಿ ಸರ್ಕಾರ ಒಂದು ಘೋರ ಅನ್ಯಾಯವನ್ನು ಮಾಡಿದೆ. ಸರಿಯಾದಂಥ ವಿದ್ಯಾರ್ಹತೆ ಇರತಕ್ಕಂಥವರನ್ನು ಪ್ರಿನ್ಸಿಪಾಲರನ್ನಾಗಿ ನೇಮಕ ಮಾಡಬೇಕು. ಉದಾಹರಣೆಗೆ, ಒಂದು ವೈದ್ಯಕೀಯ ಕಾಲೇಜಿಗೆ ಒಬ್ಬರು ಪ್ರಿನ್ಸಿಪಲ್ ಆಗಬೇಕು ಎಂದರೆ ಆತ ಎಂ.ಡಿ. ಮಾಡಿರಬೇಕು, ಎಂ.ಎಸ್. ಮಾಡಿರಬೇಕು. ಎಂ.ಬಿ.ಬಿ.ಎಸ್. ಮಾಡಿರುವವರನ್ನು ಅವರಿಗೆ ಸೀನಿಯಾರಿಟಿ ಇದೆ ಎಂದು ಜ್ಯೇಷ್ಠತೆ ಆಧಾರದ ಮೇಲೆ ಪ್ರಿನ್ಸಿಪಾಲರನ್ನು ಮಾಡಲು ಆಗುವುದಿಲ್ಲ. ಅದೇ ರೀತಿಯಲ್ಲಿ, ಪಾಲಿಟೆಕ್ನಿಕ್ ಕಾಲೇಜಿಗೆ ಪ್ರಿನ್ಸಿಪಾಲರನ್ನು ನೇಮಕ ಮಾಡತಕ್ಕಂಥ ಸಂದರ್ಭದಲ್ಲಿ, ತಾತ್ಕಾಲಿಕವಾದಂಥ ವ್ಯವಸ್ಥೆಯನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ಬೆಂಗಳೂರಿನಲ್ಲಿ ಅತ್ಯಂತ ಪುರಾತನವಾಗಿರತಕ್ಕಂಥ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಇದೆ. ಅದು ದೇಶದಲ್ಲೇ ಭಾರೀ ದೊಡ್ಡದಾದಂಥ ಮತ್ತು ಬಹಳ ಹೆಸರಾದಂಥ ಕಾಲೇಜು. ಬಹು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಓದತಕ್ಕಂಥ ಕಾಲೇಜು ಅದು. ನಾನಾ ರೀತಿಯ ತಜ್ಞರು ಇರತಕ್ಕಂಥ ಕಾಲೇಜು ಅದು. ಅಲ್ಲಿ ಬಿ.ಇ., ಎಂ.ಇ., ಮಾಡಿರತಕ್ಕಂಥವರೂ ಇದ್ದರೂ ಡಿಪ್ಲೊಮೋ ಆಗಿರತಕ್ಕಂಥವರನ್ನು ಪ್ರಿನ್ಸಿಪಾಲರನ್ನಾಗಿ ಮಾಡಿದ್ದಾರೆ. ಅಲ್ಲಿಗೆ ಪ್ರಿನ್ಸಿಪಾಲರನ್ನು ತುಂಬತಕ್ಕಂಥ ಸಂದರ್ಭದಲ್ಲಿ ಬಿ.ಇ. ಮಾಡಿರತಕ್ಕಂಥವರನ್ನು, ಎಂ.ಇ. ಮಾಡಿರತಕ್ಕಂಥವರನ್ನು, ಜೇಷ್ಠತೆ ಇರತಕ್ಕಂಥವರನ್ನು ನೇಮಕ ಮಾಡಬೇಕಾಗಿತ್ತು. ಆದರೆ, ಅದಕ್ಕೆ ಅನರ್ಹರಾಗಿರತಕ್ಕಂಥವರನ್ನು ಮಾಡಿದ್ದೀರಿ. ಅದು ಸರಿಯೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಸರ್ಕಾರಿ ಪಾಲಿಟೆಕ್ನಿಕ್ ಉಪನ್ಯಾಸಕರ ಜೇಷ್ಠತಾ ಪಟ್ಟಿಯ ಪ್ರಕಾರ ಮಾಡಿದ್ದೇವೆ. ಬಿ.ಇ. ಆದವರೂ ಇದ್ದಾರೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಇಲ್ಲಿ ಏನಾಗಿದೆ ಎಂದರೆ, ಅವರು ಪಾಲಿಟೆಕ್ನಿಕ್‌ನಲ್ಲಿ ಮೊದಲಿನಿಂದಲೂ, ಬಹಳ ದಿವಸಗಳಿಂದಲೂ ಇದ್ದು, ಆ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಅವರನ್ನು ಪ್ರಭಾರದಲ್ಲಿಟ್ಟಿದ್ದೇವೆ. ಖಾಯಂ ಮಾಡಿಲ್ಲ. ಡಿ.ಪಿ.ಸಿ. ಮಾಡಿ, ಮುಂದೆ ಏನು ಮಾಡಬೇಕೋ ಅದನ್ನು ನಾವು ಮಾಡುತ್ತೇವೆ.

ಶ್ರೀ ಹೆಚ್. ಆಂಜನೇಯ : ಅದಕ್ಕೆ ತಕ್ಕಂಥ ವಿದ್ಯಾರ್ಹತೆ ಇಲ್ಲದಿರುವಂಥ ಅಭ್ಯರ್ಥಿಗಳು ಇದ್ದಾಗ ಮಾತ್ರ ಪ್ರಭಾರದಲ್ಲಿಡುತ್ತಾರೆ. ಆದರೆ ಅಲ್ಲಿ ಅರ್ಹತೆ ಇರತಕ್ಕಂಥವರು ಇದ್ದಾರೆ. ಈಗ ನೇಮಕ ಮಾಡಿರುವವರಿಗಿಂತ ಹೆಚ್ಚಿಗೆ ಓದಿರುವವರಿದ್ದಾರೆ, ಜ್ಞಾನವುಳ್ಳವರಾಗಿದ್ದಾರೆ. ಬಿ.ಇ., ಎಂ.ಇ. ಮಾಡಿರುವವರಿದ್ದಾರೆ. ಆದ್ದರಿಂದ, ನೀವು ಮಾಡಿರತಕ್ಕಂಥಾದ್ದು ಸರಿಯಲ್ಲ, ದಯಮಾಡಿ, ಪ್ರಭಾರ

ಮಾಡಿರತಕ್ಕಂಥಾದ್ದನ್ನು ರದ್ದುಮಾಡಿ, ಬಿ.ಇ., ಎಂ.ಇ., ಮಾಡಿರತಕ್ಕಂಥವರನ್ನು, ಹಾಗೂ ತಾಂತ್ರಿಕ ಇಲಾಖೆಯ ನಿಯಮಾವಳಿಗಳಡಿಯಲ್ಲಿ ಬರತಕ್ಕಂಥವರಿಗೆ, ಅರ್ಹತೆ ಇರತಕ್ಕಂಥವರನ್ನು ಮಾಡಬೇಕು ಎನ್ನುವುದು ನನ್ನ ಒತ್ತಾಯ. ಅದನ್ನು ಮಾಡುವಿರಾ?

ಶ್ರೀ ಡಿ. ಮಂಜುನಾಥ್ : ಈಗ ಜೇಷ್ಠತಾ ಪಟ್ಟಿಯ ಪ್ರಕಾರ ಮಾಡುತ್ತಿದ್ದು, ಅವರನ್ನು ಪ್ರಭಾರದಲ್ಲಿ ಇಟ್ಟಿದ್ದಾರೆ. ಅವರನ್ನೇನೂ ಖಾಯಂ ಮಾಡಿಲ್ಲ. ಬಿ.ಇ. ಮಾಡಿರುವವರೂ ಇದ್ದಾರೆ. ಅವರು ನಮ್ಮನ್ನು ನೇಮಕ ಮಾಡಿ ಎಂದು ಕೇಳುತ್ತಾರೆ. ನಾವು ಬಹಳ ದಿವಸಗಳಿಂದ ಇದ್ದೇವೆ. ನಮ್ಮನ್ನೇ ಮಾಡಬೇಕು ಎಂದು ಇವರು ಕೇಳುತ್ತಾರೆ. ಅದಕ್ಕಾಗಿಮ ಸಿ ಅಂಡ್ ಆರ್ ರೂಲ್ಸನ್ನು ಮಾಡುತ್ತಿದ್ದೇವೆ. ಅದು ಪರಿಶೀಲನೆಯಲ್ಲಿದೆ. ಅದಷ್ಟು ಜಾಗ್ರತೆ ನಾವು ಈ ವಿಷಯವನ್ನು ತೀರ್ಮಾನ ಮಾಡಿ, ಪ್ರಭಾರವನ್ನು ತಪ್ಪಿಸುತ್ತೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ರಾಜೇಂದ್ರ ವರ್ಮಾರವರು ಉಪಪ್ರಶ್ನೆ ಕೇಳಲು ಎದ್ದುನಿಂತರು)

ಅಧ್ಯಕ್ಷರು : ಮುಂದಿನ ಪ್ರಶ್ನೆಗೆ ಹೋಗೋಣ. ಮಾನ್ಯ ರವಿಯವರು, 266ನೇ ಪ್ರಶ್ನೆಯನ್ನು ಕೇಳಿ. ಮಾನ್ಯ ರಾಜೇಂದ್ರ ವರ್ಮಾರವರೆ, ದಯಮಾಡಿ ಕುಳಿತುಕೊಳ್ಳಿ, ಒಂದು ಗಂಟೆಯೊಳಗೆ ಪ್ರಶ್ನೋತ್ತರವನ್ನು ಮುಗಿಸಬೇಕು. ರವಿಯವರೇ, ನಿಮ್ಮನ್ನು ಕರೆದಿದ್ದೇನೆ, ನೀವು ಕೇಳಿ. ದಯಮಾಡಿ ಉಳಿದವರು ಕುಳಿತುಕೊಳ್ಳಬೇಕು. ಈ ರೀತಿಯಾದರೆ ಸದನ ನಡೆಸಲು ಸಾಧ್ಯವಾಗುವುದಿಲ್ಲ. ಒಂದು ಗಂಟೆಯೊಳಗೆ 15 ಪ್ರಶ್ನೆಗಳು ಮುಗಿಯಬೇಕು. ಈಗ ನಾನು ಮಾನ್ಯ ರವಿಯವರನ್ನು ಕರೆದಿದ್ದೇವೆ. ನೀವು ಸುಮ್ಮನೆ ನಿಂತುಕೊಂಡು ಈ ರೀತಿ ಮಾಡಿದರೆ ಹೇಗೆ?

ಶ್ರೀ ರಾಜೇಂದ್ರ ವರ್ಮಾ : ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಇದಕ್ಕೆ ಸ್ವಲ್ಪ ಅವಕಾಶಮಾಡಿಕೊಡಬೇಕು. ರಾಜ್ಯದಲ್ಲಿ ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕರ ಪಗಾರದ ಬಗ್ಗೆ ಹೇಳುತ್ತೇವೆ.

ಅಧ್ಯಕ್ಷರು : ನಾನು ಅವರನ್ನು ಕರೆದಿದ್ದೇನೆ. ತಾವು ದಯಮಾಡಿ ಕುಳಿತುಕೊಳ್ಳಿ. ಈಗಾಗಲೇ ಮೂರು ಉಪಪ್ರಶ್ನೆಯಾಗಿದೆ. ಅದಕ್ಕಿಂತ ಹೆಚ್ಚಿಗೆ ಅವಕಾಶ ಕೊಡಲು ಬರುವುದಿಲ್ಲ. ರವಿಯವರೇ ನೀವು ಕೇಳಿ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ರಾಜೇಂದ್ರ ವರ್ಮಾ : ಕಳೆದ 10 ತಿಂಗಳುಗಳಿಂದ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳ ಪಗಾರವನ್ನು ತಡೆಹಿಡಿದಿದ್ದಾರೆ. ಅದನ್ನು ಏಕೆ ತಡೆದಿದ್ದಾರೆ ಎಂಬುದನ್ನು ದಯವಿಟ್ಟು ಹೇಳಬೇಕು. ಇದರಿಂದ ಅವರು ವಿದ್ಯಾರ್ಥಿಗಳಿಗೆ ಕಲಿಸುವಂಥ ಪರಿಸ್ಥಿತಿ ಇಲ್ಲದ್ದರಿಂದ ವಿದ್ಯಾರ್ಥಿಗಳಿಗೆ ಬಹಳ ಅನಾನುಕೂಲವಾಗುತ್ತದೆ.

ಶ್ರೀ ಡಿ. ಮಂಜುನಾಥ್ : ಅದಕ್ಕೆ ಅವರು ಪ್ರತ್ಯೇಕವಾದ ಪ್ರಶ್ನೆ ಕೇಳಲಿ.

ಶ್ರೀ ಎನ್. ಯೋಗೀಶ್ ಭಟ್ : ಇದಕ್ಕೆ ಪ್ರತ್ಯೇಕ ಪ್ರಶ್ನೆ ಏಕೆ ಬೇಕು? ಇದು ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರ ಸಂಬಳದ ಪ್ರಶ್ನೆ.

ಶ್ರೀ ರಾಜೇಂದ್ರ ವರ್ಮಾ : ರಾಜ್ಯದ 27 ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರು ಸತ್ಯಾಗ್ರಹ ಹೂಡಿದ್ದಾರೆ. ಅವರಿಗೆ 10 ತಿಂಗಳಿಂದ ಪಗಾರ ಕೊಟ್ಟಿಲ್ಲ.

ಗೊಂದಲ

ಅಧ್ಯಕ್ಷರು : ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಗೊಂದಲ

ಶ್ರೀ ಅರಗ ಜ್ಞಾನೇಂದ್ರ : ಉಪನ್ಯಾಸಕರ ಸಂಬಳ ಕೊಡಿ ಎಂದು ಅವರು ಕೇಳಿದ್ದು. ಬೇರೇನೂ ಕೇಳಲಿಲ್ಲ.

ಗೊಂದಲ

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಪ್ರತಿಯೊಬ್ಬ ಸದಸ್ಯರಿಗೂ ಪ್ರಶ್ನೆ ಕೇಳತಕ್ಕಂಥ ಹಕ್ಕು ಇದೆ. ಎಲ್ಲೆಲ್ಲಿ ನಿಮಗೆ ಸಮಾಧಾನವಾಗುವುದಿಲ್ಲ, ಆಗ ನೀವು ಉಪ ಪ್ರಶ್ನೆಗಳನ್ನೂ ಕೂಡ ಕೇಳಬಹುದು. ಮಂತ್ರಿಗಳಿದ್ದಾರೆ, ಉತ್ತರ ಕೊಡುತ್ತಾರೆ, ಅದಕ್ಕೆ ನೀವು ಗಲಾಟೆ ಮಾಡಿದರೆ ಸರಿಯಾಗುವುದಿಲ್ಲ. ದಯವಿಟ್ಟು ಒಬ್ಬೊಬ್ಬರೇ ಪ್ರಶ್ನೆ ಕೇಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಸಂಬಳ ಕೊಡುತ್ತಿಲ್ಲ ಎಂದು ಅವರು ಹೇಳಿದರು. ಇದರಲ್ಲಿ ಗಲಾಟೆ ಎಲ್ಲಿಂದ ಬಂತು?

ಶ್ರೀ ವಾಟಾಳ್ ನಾಗರಾಜ್ : ಇಡೀ ರಾಜ್ಯಾದ್ಯಂತ ಉಪನ್ಯಾಸಕರು ಬಹಳ ನೋವಿನಿಂದ ಇದ್ದಾರೆ. ಅದರ ಬಗ್ಗೆ ಹೇಳಿ ಎಂದರೆ, ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿ ಎಂದರೆ ಹೇಗೆ? ನೀವು ಹಿರಿಯ ಸಚಿವರಿದ್ದೀರಿ. 10 ತಿಂಗಳಿಂದ ಉಪನ್ಯಾಕರಿಗೆ ಏಕೆ ಸಂಬಳ ಕೊಟ್ಟಿಲ್ಲ ಎಂಬುದನ್ನು ನೀವು ಹೇಳಿ.

ಅಧ್ಯಕ್ಷರು : ಮಾನ್ಯ ಸಭಾನಾಯಕರು, ಅದನ್ನು ಸ್ಪಷ್ಟೀಕರಣ ಮಾಡಿ, ಈ ರೀತಿಯಾದರೆ ಸಭೆ ನಡೆಸುವುದು ನನಗೆ ಕಷ್ಟವಾಗುತ್ತದೆ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಎಲ್ಲಿ 10 ತಿಂಗಳಿಂದ ವೇತನ ಸಿಕ್ಕಿಲ್ಲ. ನಾನು ಇವತ್ತು ಮಾನ್ಯ (ಮಂಜುನಾಥ್‌ರವರು) ಜೊತೆಯಲ್ಲಿ ಮಾತನಾಡಿ, ಅತೀ ಶೀಘ್ರದಲ್ಲೇ ಅವರಿಗೆ ವೇತನ ಸಿಗುವಂಥ ವ್ಯವಸ್ಥೆಯನ್ನು ಮಾಡುತ್ತೇನೆ. ಅದಕ್ಕೆ ನಾನು ಹೇಳುವುದೇನೆಂದರೆ, ಗಲಾಟೆಯಿಂದ ಅದಕ್ಕೆ ಪರಿಹಾರ ಸಿಗುವುದಿಲ್ಲ. ಉಪನ್ಯಾಸಕರಿಗೆ 10 ತಿಂಗಳಿಂದ ಸಂಬಳ ಸಿಗದಿರುವುದಕ್ಕೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಬಹಳ ಧಾರಾಳಿಗಳಿದ್ದಾರೆ. ಇದಕ್ಕೆ ಪರಿಹಾರ ಸಿಗಬಹುದು ಎನ್ನುವ ಉದ್ದೇಶದಿಂದ ಈ ಪ್ರಮುಖವಾದ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ತಾವು ಅನುದಾನ ಕೊಡುತ್ತಿರುವಂಥ ಕಾಲೇಜುಗಳಲ್ಲಿ ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿರುವ ಉಪನ್ಯಾಸಕರುಗಳಿಗೆ 10 ತಿಂಗಳಿಂದ ಸಂಬಳ ಕೊಡದಿದ್ದರೆ ಅವರು ಬದುಕುವುದು ಹೇಗೆ? ಅವರ ಹೆಂಡತಿ ಮಕ್ಕಳನ್ನು ಸಾಕುವುದು ಹೇಗೆ? ಅವರ ಮುಂದಿನ ಭವಿಷ್ಯವೇನು? ಮಾನ್ಯ ಮಂಜುನಾಥ್‌ರವರೇ, ತಾವು ಹಿರಿಯ ಸಚಿವರಿದ್ದೀರಿ. ಇದಕ್ಕೆ ತಾವು ಸಮಯ ತೆಗೆದುಕೊಳ್ಳಿ. ತಮಗೆ ಅನುಭವ ಇದೆ. ತಾವು ಆ ಇಲಾಖೆಯನ್ನು ಹೊಸದಾಗಿ ವಹಿಸಿಕೊಂಡಿದ್ದೀರಿ. ಇನ್ನೊಂದು ವಾರದಲ್ಲಿ ಸಂಬಳ ಕೊಡುವಂತ ವ್ಯವಸ್ಥೆ ಮಾಡುತ್ತೇವೆ ಎನ್ನುವುದನ್ನಾದರೂ ತಾವು ಹೇಳಬೇಕಲ್ಲವೇ? ಇಲ್ಲದಿದ್ದರೆ, ನಾವು ಪ್ರಶ್ನೆ ಕೇಳಿ, ಉತ್ತರ ತೆಗೆದುಕೊಂಡರೆ ಅದರಿಂದೇನು ಉಪಯೋಗವಾಗುತ್ತದೆ?

ಶ್ರೀ ಡಿ. ಮಂಜುನಾಥ್ : ಅದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ನನಗೆ ಹಾಕಿ. ನಾನು ಉತ್ತರ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಜ್ಯಾದ್ಯಂತ, ಇರುವ 27 ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿರುವ ಉಪನ್ಯಾಸಕರುಗಳಿಗೆ 10 ತಿಂಗಳಿಂದ ಸಂಬಳ ಕೊಟ್ಟಿಲ್ಲ. ದಯಮಾಡಿ

ತಾವು ಅಧಿಕಾರಿಗಳ ಜೊತೆ ಇವತ್ತೇ ಸಮಾಲೋಚನೆ ಮಾಡಿ, ಮುಂದಿನ 8-10 ದಿವಸದಲ್ಲಾದರೂ ನಿಮ್ಮ ಇಲಾಖೆಗೆ ಹೇಳಿ ಹಣವನ್ನು ಬಿಡುಗಡೆ ಮಾಡಿಸುವಿರಾ? ಅಷ್ಟು ಮಾಡಿಕೊಟ್ಟರೆ ಸಾಕು. ಅದಕ್ಕೆ ಸರಿಯಾದ ಉತ್ತರ ಕೊಡಿ.

ಶ್ರೀ ಧರ್ಮಸಿಂಗ್ : ಮಾನ್ಯ ವಿರೋಧ ಪಕ್ಷದ ನಾಯಕರು ಈ ಸಮಸ್ಯೆಗಳ ಬಗ್ಗೆ ಏನು ಹೇಳಿದ್ದಾರೆ ಆ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿ ಪಗಾರ ಬಿಡುಗಡೆ ಮಾಡತಕ್ಕಂಥ ಪ್ರಯತ್ನ ಮಾಡುತ್ತೇನೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸುವುದು

17 (266) : ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಈ ಹಿಂದೆ ಅರೆಕಾಲಿಕವಾಗಿ ಉಪನ್ಯಾಸಕ ಸೇವೆ ಸಲ್ಲಿಸಿದವರ ಪೈಕಿ ಎಷ್ಟು ಜನರನ್ನು ಖಾಯಂಮಾತಿ ಪ್ರಕ್ರಿಯೆಯಡಿ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ;

ಆ) ಈ ಪೈಕಿ ಪ್ರಥಮ ದರ್ಜೆ ಕಾಲೇಜು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಎಷ್ಟು ಉಪನ್ಯಾಸಕರಿಗೆ ಸೇವಾ ಸಕ್ರಮಾತಿ ಮಾಡಲಾಗಿದೆ; (ವಿಷಯವಾರು, ಪೂರ್ಣ ಮಾಹಿತಿ ನೀಡುವುದು);

ಇ) ಇನ್ನುಳಿದ ಸೇವಾ ಸಕ್ರಮಾತಿಗೆ ಬಾಕಿ ಇರುವವರ ಸಂಖ್ಯೆ ಎಷ್ಟು; ಇವರನ್ನು ಯಾವಾಗ ಸಕ್ರಮ ಮಾಡಲಾಗುತ್ತದೆ;

ಈ) ಇವರ ನೇಮಕಾತಿಯಲ್ಲಿ ವಿಳಂಬವಾಗುತ್ತಿರಲು ಕಾರಣಗಳೇನು; ಸದರಿ ಉಪನ್ಯಾಸಕರುಗಳನ್ನು ಪದವಿ ಪೂರ್ವ ಕಾಲೇಜುಗಳಿಗೆ ನೇಮಕಗೊಳಿಸಲು ಸರ್ಕಾರ ಚಿಂತಿಸಿದೆಯೇ; ಹಾಗಿದ್ದಲ್ಲಿ ಸರ್ಕಾರ ಅನುಮತಿ ನೀಡಲು ಇರುವ ತೊಂದರೆಗಳೇನು, ಯಾವಾಗ ಅನುಮತಿ ನೀಡಲಾಗುತ್ತದೆ;

ಉ) ಈ ಶೈಕ್ಷಣಿಕ ವರ್ಷದಿಂದಲೇ ಇವರುಗಳನ್ನು ಸೇವೆಯಲ್ಲಿ ವಿಲೀನಗೊಳಿಸಲಾಗುವುದೇ; ಇದಕ್ಕೆ ಸರ್ಕಾರ ಕಾಲಮಿತಿಯನ್ನೇನಾದರೂ ಹಾಕಿಕೊಂಡಿದೆಯೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):

ಅ) ಸ್ನಾತಕೋತ್ತರ ಪದವಿಯಲ್ಲಿ ಶೇಕಡ 55 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ (1993-94 ಮತ್ತು 1994-95) ಎರಡು ವರ್ಷ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವ ಉಪನ್ಯಾಸಕರುಗಳ ಪೈಕಿ 470 ಅರೆಕಾಲಿಕ ಉಪನ್ಯಾಸಕರುಗಳನ್ನು ಸೇವೆಯಲ್ಲಿ ವಿಲೀನಗೊಳಿಸಲಾಗಿದೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಈ ಹಿಂದೆ ಅರೆಕಾಲಿಕ ಉಪನ್ಯಾಸಕ ಸೇವೆ ಸಲ್ಲಿಸಿದ ಅರ್ಹ 671 ಜನರ ಪೈಕಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ 442 ಮಂದಿಯ ಸೇವೆಯನ್ನು ಸಕ್ರಮಗೊಳಿಸಲಾಗಿದೆ.

ಆ) ಮೇಲ್ಕಂಡ 470 ಅರೆಕಾಲಿಕ ಉಪನ್ಯಾಸಕರುಗಳನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಯಂಗೊಳಿಸಲಾಗಿದ್ದು, ಸದರಿ ಮಾಹಿತಿಯನ್ನು ವಿವಿಧ ವಿಷುವಾರು ಅನುಬಂಧ-Iರಲ್ಲಿ ನೀಡಲಾಗಿದೆ.

ಅರ್ಹ 671 ಜನರ ಪೈಕಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ 442 ಮಂದಿಯ ಸೇವೆಯನ್ನು ಸಕ್ರಮಗೊಳಿಸಲಾಗಿದೆ.